# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080-23378375-80, Email:souharda@souharda.coop


ಸಂಖ್ಯೆ : ಕರಾಸೌಸಂಸನಿ/ಸುತ್ತೋಲೆ/ಆ–03/2018–19 ದಿನಾಂಕ:21.05.2018

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ
ಮುಖ್ಯಕಾರ್ಯನಿರ್ವಾಹಕರುಗಳಿಗೆ,

**ಸುತ್ತೋಲೆ–03**

ಮಾನ್ಯರೇ,

ವಿಷಯ : ನಾಮಮಾತ್ರ ಸದಸ್ಯರು ಮತ್ತು ಸದಸ್ಯೇತರರಿಂದ ಠೇವಣಿ ಸ್ವೀಕರಿಸದಿರುವ ಕುರಿತು.

ಉಲ್ಲೇಖ : 1. ಸಂಯುಕ್ತ ಸಹಕಾರಿಯ ದಿನಾಂಕ 27–04–2017ರ ಪತ್ರ ಸಂಖ್ಯೆ: ಸಂಸ/ಶಾ–368/ಶಾ/ಆರ್‌ಬಿಐ/2017–18.

2. ದಿನಾಂಕ 19 ಫೆಬ್ರವರಿ 2018ರ ಭಾರತೀಯ ರಿಸರ್ವ್ ಬ್ಯಾಂಕಿನ ಪತ್ರ ಸಂಖ್ಯೆ: DCBS.BL.(Ret) No. 2252/06.02.322/2017-18.

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1ರ ಪತ್ರದ ಮೂಲಕ ಸೌಹಾರ್ದ ಸಹಕಾರಿಗಳು ತನ್ನ ಸದಸ್ಯರಿಂದ ಮಾತ್ರ ಠೇವಣಿಯನ್ನು ಸಂಗ್ರಹಿಸತಕ್ಕದ್ದು. ಯಾವುದೇ ಕಾರಣಕ್ಕೂ ಸದಸ್ಯೇತರರಿಂದ ಠೇವಣಿಗಳನ್ನು ಸಂಗ್ರಹಿಸತಕ್ಕದ್ದಲ್ಲ ಹಾಗೂ ಠೇವಣಿ ಸಂಗ್ರಹಣೆಗೆ ಸಾರ್ವಜನಿಕ ಮೇಳಗಳನ್ನು ಆಯೋಜಿಸತಕ್ಕದ್ದಲ್ಲ ಎಂದು ಸುತ್ತೋಲೆಯನ್ನು ನೀಡಲಾಗಿತ್ತು. ಮುಂದುವರೆದು ಉಲ್ಲೇಖ 2ರ ಪತ್ರದ ಮೂಲಕ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 22ರ ಪ್ರಕಾರ "ಭಾರತೀಯ ರಿಸರ್ವ್ ಬ್ಯಾಂಕಿನಿಂದ, ಬ್ಯಾಂಕಿಂಗ್ ವ್ಯವಹಾರ ನಡೆಸಲು ಪರವಾನಗಿ ಪಡೆದಿರುವ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ ಇತರೆ ಯಾವುದೇ ಸೌಹಾರ್ದ ಸಹಕಾರಿಗಳು ನಾಮಮಾತ್ರ ಸದಸ್ಯರು ಸೇರಿದಂತೆ ಸದಸ್ಯೇತರರಿಂದ ಸಾರ್ವಜನಿಕರಿಂದ ಠೇವಣಿಯನ್ನು ಸಂಗ್ರಹಿಸತಕ್ಕದಲ್ಲ" ಎಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ ಯಾವುದೇ ಸೌಹಾರ್ದ ಸಹಕಾರಿಗಳು ನಾಮಮಾತ್ರ ಸದಸ್ಯರು ಸೇರಿದಂತೆ ಇತರೆ ಯಾವುದೇ ಸದಸ್ಯೇತರರಿಂದ ಠೇವಣಿಗಳನ್ನು ಸ್ವೀಕರಿಸದಿರಲು ಸೂಚಿಸಿ ಭಾರತೀಯ ರಿಸರ್ವ್ ಬ್ಯಾಂಕ್ ಬೆಂಗಳೂರು ಇವರು, ಸಂಯುಕ್ತ ಸಹಕಾರಿಗೆ ಪತ್ರವನ್ನು ಬರೆದಿರುತ್ತಾರೆ.

ಆದ್ದರಿಂದ ಸೌಹಾರ್ದ ಸಹಕಾರಿಗಳು ನಾಮಮಾತ್ರ ಸದಸ್ಯರು ಸೇರಿದಂತೆ ಇತರೆ ಯಾವುದೇ ಸದಸ್ಯೇತರರಿಂದ ಠೇವಣಿಗಳನ್ನು ಸ್ವೀಕರಿಸಿದ್ದಲ್ಲಿ ಅಂತಹ ನಾಮಮಾತ್ರ ಸದಸ್ಯರನ್ನು ಹಾಗೂ ಸದಸ್ಯೇತರರನ್ನು ತಕ್ಷಣದಿಂದ ಸಹಕಾರಿಯ ಸದಸ್ಯರನ್ನಾಗಿ ಸೇರಿಸಿಕೊಳ್ಳತಕ್ಕದ್ದು. ಕಾಯ್ದೆಯನ್ನು ಉಲ್ಲಂಘಿಸಿ, ನಾಮಮಾತ್ರ ಸದಸ್ಯರು ಹಾಗೂ ಸದಸ್ಯೇತರರಿಂದ ಠೇವಣಿಯನ್ನು ಸಂಗ್ರಹಿಸಿದರೆ ಅಂತಹ ಸಹಕಾರಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲು ಅಗತ್ಯ ಕ್ರಮವಿಡಲು ಆರ್.ಬಿ.ಐ ಸೂಚಿಸಿದೆ. ಅದರಂತೆ ಎಲ್ಲ ಸೌಹಾರ್ದ ಸಹಕಾರಿಗಳು ಈ ಕುರಿತು ಅಗತ್ಯ ಕ್ರಮವಿಟ್ಟು ಕ್ರಮದ ವರದಿಯನ್ನು kssfcladmin@souharda.coop email idಗೆ ಆದ್ಯತೆ ಮೇರೆಗೆ ಕಳುಹಿಸಲು ಸೂಚಿಸಿದೆ. ಒಂದು ವೇಳೆ ಯಾವುದೇ ಸೌಹಾರ್ದ ಸಹಕಾರಿಯು ಸದರಿ ಕ್ರಮವನ್ನು ವಹಿಸುವಲ್ಲಿ ವಿಫಲವಾದಲ್ಲಿ ಆಯಾ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಹಾಗೂ ಆಡಳಿತ ಮಂಡಲಿ ಸದಸ್ಯರನ್ನು ಹೊಣೆಗಾರರನ್ನಾಗಿ ಮಾಡಿ ಅಗತ್ಯ ಕ್ರಮವಹಿಸಲಾಗುವುದು ಎಂಬುದನ್ನು ಈ ಮೂಲಕ ತಿಳಿಸಿದೆ.

ವಂದನೆಗಳೊಂದಿಗೆ,

ಸಹಿ/–
(ಶರಣಗೌಡ ಜಿ ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು